**ದಿನಾಂಕಃ 07-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಆರ್.ಬಿ.ಕೆ., ಆರೋಪಿ ಪರ ವಕೀಲರಿಂದಃ**

**1.** ನಾನು 5ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವ್ಯಾಪಾರ ಮಾಡುವ ಬಗ್ಗೆ ಸಂಪೂರ್ಣವಾದ ಜ್ಞಾನವನ್ನು ಹೊಂದಿರುತ್ತೇನೆ. ನೀವು ಮೀನ, ಕೋಳಿ ವ್ಯಾಪಾರ ಮಾಡುತ್ತಿದ್ದು, ನೀವು ಅವುಗಳನ್ನು ತೆಗೆಸಿಕೊಳ್ಳುವಾಗ ಎಷ್ಟು ತರಿಸಿರುತ್ತೀರಿ ಎಂಬುದರ ಬಗ್ಗೆ ಕಚ್ಚಾ ಬಿಲ್‌ಗಳು ಇರುತ್ತವೆ ಅಂದರೆ ಹೌದು. ಅದೇ ರೀತಿ ಆ ದಿನ ಎಷ್ಟೇಷ್ಟು ಮೀನ, ಕೋಳಿ ಕೊಟ್ಟ ಬಗ್ಗೆ ಅವರ ಬಳಿ ಮಾಹಿತಿ ಇರುತ್ತದೆ, ನಮ್ಮ ಬಳಿ ಇರುವುದಿಲ್ಲ. ನೀವು ಮಾಲು ಕೊಟ್ಟವರಿಂದ ಎಷ್ಟೇಷ್ಟು ಹಣ ಬಾಕಿ ಬರಬೇಕು ಎಂಬುದರ ಬಗ್ಗೆ ಯಾವುದೇ ಲೆಕ್ಕ ಪತ್ರದ ಪುಸ್ತಕ ನಿಮ್ಮ ಬಳಿ ಇರುವುದಿಲ್ಲ ಅಂದರೆ ಇರುವುದಿಲ್ಲ. ನಿಮ್ಮ ಬಳಿ ಸುಮಾರು 70 ರಿಂದ 80 ಜನ ಮಾಲು ತೆಗೆದುಕೊಂಡಿರುತ್ತಾರೆ ಅಂದರೆ ಹೌದು. ನಿಮ್ಮ ಬಳಿ ಮಾಲು ತೆಗೆದುಕೊಂಡು ಹೋದವರ ಹೆಸರು, ಎಷ್ಟು ಬರಬೇಕು ಎಂಬುದರ ಮೊತ್ತ, ಬರೆದುಕೊಂಡಿರುವುದಿಲ್ಲ ಅಂದರೆ ಇಲ್ಲಾ. ಯಾರ್ಯಾರು ಎಷ್ಟು ಹಣ ಕೊಟ್ಟಿರುತ್ತಾರೆ, ಎಷ್ಟು ಬಾಕಿ ಬರಬೇಕು ಎಂಬುದರ ಬಗ್ಗೆ ಬರೆದುಕೊಂಡಿರುವುದಿಲ್ಲ ಅಂದರೆ ಅವರವರಿಗೆ ಬರೆದುಕೊಟ್ಟಿರುತ್ತೇನೆ.

**2.** ಈ ಪ್ರಕರಣದ ಆರೋಪಿತನಿಗೆ ಯಾವ್ಯಾವಾ ತಾರೀಖಿನಂದು, ಕೋಳಿ, ಮೀನು, ಎಷ್ಟೇಷ್ಟು ಕೊಟ್ಟಿರುತ್ತೀರಿ ಅಂತಾ ಹೇಳಲು ಬರುತ್ತದೆ ಅಂದರೆ ಈಗ ನೆನಪಿಲ್ಲ. ಎಷ್ಟನೇ ಇಸ್ವಿಯಿಂದ ಆರೋಪಿಗೆ ಕೊಟ್ಟಿರುತ್ತೀರಿ ಅಂದರೆ, 2021 ನೇ ಇಸ್ವಿಯಲ್ಲಿ ಕೊಟ್ಟಿರುತ್ತೇನೆ. 2021 ನೇ ಇಸ್ವಿಯಲ್ಲಿ ಎಷ್ಟೇಷ್ಟು ಮಾಲು ತರಿಸಿದ ಬಗ್ಗೆ ಕಚ್ಚಾ ಬಿಲ್‌ಗಳು ನಿಮ್ಮ ಬಳಿ ಇರುತ್ತವೆ ಅಂದರೆ ಇಲ್ಲಾ. ಆ

ಎಲ್ಲಾ ಬಿಲ್‌ಗಳು ನಿಮ್ಮ ಬಳಿ ಇದ್ದರೂ ಕೂಡಾ ಇಲ್ಲಾ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ರೂ. 300/- ವೆಚ್ಚಗಳನ್ನು ಭರಿಸಲು ಆದೇಶಿಸಿ ಸಮಯ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- **07-11-2024**
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.